‘ರಪ್’ ಎಂದು ಕೆನ್ನೆಗೆ ಬಿಗಿದ. ಒಸಡುಗಳು ಒಡೆದು ರಕ್ತ ಜಿನುಗಿತು. “ಹುಟ್ಟಿಲ್ಲ ಅನಿಸಿಬಿಡ್ತೀನಿ ಬೋಸುಡುಕೆ. ಎಷ್ಟು ದಿನದಿಂದ ನಡಿತಾ ಇದೆ ಈ ಏರಿಯಾದಲ್ಲಿ?” ಪ್ರಶ್ನೆಯ ಹಿಂದೆಯೇ ರಪ್ ರಪ್ ಎಂದು ಮತ್ತೆ ಬಿಗಿದ. ರಕ್ತದ ಜೊತೆ ಬಾಯಿಯಿಂದ ಎಂಜಲು ಮತ್ತೆ ನೆಲದ ಮೇಲೆ ಬಿತ್ತು. ಅರ್ಧಹರಿದ ಸಲ್ಮಾನ್ ಖಾನನ ಚಿತ್ರವಿದ್ದ ಟೀ ಶರ್ಟ್ ಪೂರ್ಣ ಹರಿಯಿತು. ಮುದ್ದೆಯಾಗಿ ನೆಲದ ಮೇಲೆ ಕುಳಿತ ಅವನು ಹರಿದ ಟೀ ಶರ್ಟಿನಿಂದಲೇ ಎಂಜಲನ್ನ ಒರೆಸುತ್ತ ಬಿಕ್ಕಿದ. “ನನ್ನ ಬಿಟ್ಟುಬಿಡಿ ಸರ್. ನಾನು ಏನೂ ತಪ್ಪು ಮಾಡಿಲ್ಲ. ಇದಕ್ಕೂ ನನಗೂ ಯಾವ ಸಂಬಂಧವೂ ಇಲ್ಲ. ಈಗ ಒಂದು ವಾರದ ಹಿಂದೆ ಜೆ.ಪಿ. ನಗರದ ಫುಡ್‌ವರ್ಡ್‌ನಲ್ಲಿ ಒಂದು ನಾಲ್ಕು ಈರುಳ್ಳಿ, ಒಂದು ಕಾಲಿಫ್ಲವರ್ ಮತ್ತು ನಾಲ್ಕು ಟೊಮೆಟೊ ಕದ್ದದ್ದು ನಿಜ. ಮಗ ಪಾವ್‌ಭಾಜಿಗೆ ಆಸೆಪಟ್ಟ ಸರ್. ಯಾವ ಹೆಣ್ಣುಮಕ್ಕಳ ಸರಕ್ಕೂ ನಾನು ಕೈಹಾಕಿಲ್ಲ. ಯಾರೋ ನಿಮಗೆ ಸುಳ್ಳು ಸುದ್ದಿ ಕೊಟ್ಟಿರಬೇಕು. ಅದನ್ನೆಲ್ಲಾ ಮಾಡಿದರೆ ಮನೆಯವರು ಸುಮ್ಮನಿರಲ್ಲ. ನಮಗೆ ಮಾನ ಮುಖ್ಯ ಸರ್.” ರಕ್ತ ತುಟಿಗೆ ಬಂದಿರಬೇಕು, ಮಾತು ತಡವರಿಸಿತು. ಕಣ್ಣಲ್ಲಿ ಕೆಲಹೊತ್ತು ತಡೆದಿದ್ದ ನೀರು ನೆಲಕ್ಕೆ ಬಿತ್ತು. ಎಣ್ಣೆ ಹಾಕಿ ಬಾಚಿದ ಕೂದಲು ಈಗ ಕೆದರಿಹೋಗಿತ್ತು.



**ಅಶೋಕ ಹೆಗಡೆ**

ಟೇಬಲ್ ಮುಂದೆ ಕುಳಿತ ಕಾನ್‌ಸ್ಟೆಬಲ್ ಮಿಸುಕಾಡಲಿಲ್ಲ. ಕರೆಂಟ್ ಅರ್ಧ ಕೈ ಕೊಟ್ಟಿದ್ದರಿಂದ ನಿಧಾನವಾಗಿ ತಿರುಗುವ ಪಂಖ ಯಾವ ಗಾಳಿಯನ್ನೂ ಹೊರಹಾಕುತ್ತಿರಲಿಲ್ಲ. ಗೋಡೆಯ ಮೇಲೆ ಗಾಂಧೀಜಿಯ ನಗುವ ಪಟದ ಮೇಲೆ ಮೆತ್ತಿಕೊಂಡ ದೂಳು, ನಗುವನ್ನ ಅರ್ಧ ಮುಚ್ಚಿತ್ತು. ಅಂಬೇಡ್ಕರರ ಕರಿಕೋಟನ್ನ ಒರಲೆ ಅರ್ಧ ತಿಂದಿತ್ತು. ಕೆಳಗೆ ಟೇಬಲ್ಲಿನ ಮೇಲೆಲ್ಲಾ ಹರಡಿಕೊಂಡಿದ್ದ ಕಾಗದಗಳಲ್ಲಿ ಯಾರದ್ದೋ ಕೊಲೆಯ ವರದಿ, ಮಕ್ಕಳು ಮನೆಬಿಟ್ಟ ಕತೆ ಸರಕಾರದ ದಫ್ತರಿಗೆ ಸೇರಲು ತಯಾರಾಗುತ್ತಿದ್ದವು. ದಿನನಿತ್ಯದ ರಗಳೆಗಳಿಗೆ ಬೇಸತ್ತಂತೆ ಪೊಲೀಸ್ ಪೇದೆ ದೊಡ್ಡದಾಗಿ ಆಕಳಿಸಿದ. ಹೊಡೆಯುತ್ತಿರುವ ಗೋವಿಂದನಿಗೂ ತಮಗೂ ಯಾವ ಸಂಬಂಧವೂ ಇಲ್ಲದಂತೆ ಮತ್ತೆ ಬರೆಯುವುದರಲ್ಲಿ ತಲ್ಲೀನನಾದ.

ಇನ್‌ಸ್ಪೆಕ್ಟರ್ ಗೋವಿಂದ ‘ರಪ್’ ಎಂದು ಮತ್ತೆ ಭಾರಿಸಿದ. “ಬೋಳಿಮಗನೆ, ನಿನ್ನಂತವರನ್ನ ಎಷ್ಟುಬಾರಿ ಕಂಡಿದ್ದಿನಿ ಗೊತ್ತಾ? ನಿನ್ನ ನಿಜ ಹೆಸರೇನಲೇ” ಎಂದು ಜಾಡಿಸಿದ. ಒಸಡಿನ ರಕ್ತ ನಿಧಾನವಾಗಿ ಹೆಪ್ಪು ಗಟ್ಟುತ್ತಿತ್ತು. ಕೆನ್ನೆಯ ಮೇಲೆ ಗೊವಿಂದನ ಐದು ಕೈ ಬೆರಳುಗಳ ಗುರುತು ಮೂಡಿದ್ದವು. ನೋವಿನಿಂದ ತುಂಬಿಕೊಂಡ ಕಣ್ಣನ್ನ ಮತ್ತೆ ಮತ್ತೆ ಉಜ್ಜುತ್ತ, “ಇಲ್ಲ ಸರ್, ಬಿಟ್ಟುಬಿಡಿ. ಯಾವ ತಪ್ಪನ್ನ ನಾನು ಮಾಡಿಲ್ಲ ಸರ್.” ಮತ್ತೆ ಹೊಡೆಯಲು ತಯಾರಾದ ಗೋವಿಂದನ ಕೈ ಹಿಡಿದು, “ಸತ್ಯವಾಗಲೂ ಹೇಳ್ತಿದ್ದಿನಿ ಸಾರ್ ನನ್ನ ಮಗನ ಮೇಲಾಣೆ, ನನ್ನ ಹೆಸರು ಸಮುದ್ರ. ಇಲ್ಲೇ ಪಾರ್ಕ್ ಪಕ್ಕದಲ್ಲಿ ಗುಡಿಸಲು ಹಾಕಿಕೊಂಡಿದ್ದಿನಿ. ಮಗನಿಗೆ